# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 93 (1118)
2. ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 22.02.2024
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಜಮಖಂಡಿ-ಅಥಣಿ ಮಾರ್ಗ ಮಧ್ಯದಲ್ಲಿ ಬರುವ ಹಿಪ್ಪರಗಿ ಬ್ರಿಡ್ಜ್ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗಿದೆ; ಯಾವ ಗುತ್ತಿಗೆದಾರರಿಗೆ ಟೆಂಡರ್ ನೀಡಲಾಗಿದೆ. (ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು) | ಜಮಖಂಡಿ-ಅಥಣಿ ಮಾರ್ಗ ಮಧ್ಯದಲ್ಲಿ ಬರುವ ರೂ.60.65 ಕೋಟಿ ಮೊತ್ತದ ಹಿಪ್ಪರಗಿ ಬ್ರಿಡ್ಜ್ ಕಾಮಗಾರಿಯನ್ನು ದಿನಾಂಕ:26.03.2018 ರಂದು ಗುತ್ತಿಗೆದಾರರಾದ ಶ್ರೀ ಉದಯ ಶಿವಕುಮಾರ ದಾವಣಗೆರೆ ಇವರಿಗೆ ವಹಿಸಿಕೊಡಲಾಗಿದ್ದು, ಅಂದಿನಿಂದಲೇ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. |
| ಆ) | ಸದರಿ ಕಾಮಗಾರಿಯು ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಉದ್ಭವಿಸುವುದಿಲ್ಲ. |
| ಇ) | ಪ್ರಸ್ತುತ ಸದರಿ ಕಾಮಗಾರಿಯು ಯಾವ ಹಂತದಲ್ಲಿದೆ; | ಸೇತುವೆಯ ಬದಲಾದ ವಿನ್ಯಾಸ ಮತ್ತು scopeಗೆ ಅನುಗುಣವಾಗಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಸೇತುವೆಯ ಎಲ್ಲಾ ಪಿಯರ್‌ಗಳ ತಳಪಾಯ ಕಾಮಗಾರಿ ಪೂರ್ಣಗೊಂಡಿದ್ದು ನದಿಯ ಭಾಗದಲ್ಲಿ ನೀರು ಇರುವುದರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ. |
| ಈ) | ಸದರಿ ಕಾಮಗಾರಿಯ ವಿಳಂಬಕ್ಕೆ ಕಾರಣಗಳೇನು; ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? | ಆಗಸ್ಟ್, 2019 ರಲ್ಲಿ ಸೇತುವೆ ಕಾಮಗಾರಿ ಪ್ರಗತಿಯಲ್ಲಿರುವ ಸಮಯದಲ್ಲಿ ಕೃಷ್ಣಾ ನದಿಯಲ್ಲಿ ಗರಿಷ್ಠ ಮಟ್ಟದ ಪ್ರವಾಹವು ಉಂಟಾಗಿದ್ದರಿಂದ, ಕಾಮಗಾರಿಯನ್ನು ಪ್ರವಾಹಕ್ಕೆ ಅನುಗುಣವಾಗಿ ವಿನ್ಯಾಸ ಮಾಡಿ ಪರಿಷ್ಕರಿಸುವ ಸಲುವಾಗಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | ಆದರೆ, 2019ರ ಪ್ರವಾಹಕ್ಕೆ ಅನುಗುಣವಾಗಿ ಸೇತುವೆ ಉದ್ದ 480 ಮೀ ಬದಲಾಗಿ 680 ಮೀ ಹಾಗೂ ಸೇತುವೆ ಎತ್ತರ 533.15 ಬದಲಾಗಿ 534.63 ಮಟ್ಟಕ್ಕೆ ಎತ್ತರಿಸುವ ಪರಿಷ್ಕೃತ ವಿನ್ಯಾಸ ಮತ್ತು ನಕ್ಷೆಗಳೊಂದಿಗೆ ರೂ.99.36 ಕೋಟಿಗೆ ತಯಾರಿಸಿದ ಪರಿಷ್ಕೃತ ಅಂದಾಜು ಪಟ್ಟಿಗೆ ನಿಗಮದ ಅಂದಾಜು ಪರಿಶೀಲನಾ ಸಮಿತಿಯು, ಕಾಮಗಾರಿಯ ಪರಿಷ್ಕೃತ ಮೊತ್ತವಾದ ರೂ.99.36 ಕೋಟಿಗಳಲ್ಲಿ ರೂ.59.32 ಕೋಟಿ ಮೊತ್ತದ ಕಾಮಗಾರಿಯನ್ನು ಪ್ರಸುತ ನಿಗಧಿಪಡಿಸಿರುವ ಗುತ್ತಿಗೆದಾರರಿಂದ ಹಾಗೂ ಬಾಕಿ ಉಳಿದ ರೂ.40.04 ಕೋಟಿ ಮೊತ್ತದ ಕಾಮಗಾರಿಯನ್ನು ಹೊಸದಾಗಿ ಟೆಂಡರ್ ಕರೆದು ನಿರ್ವಹಿಸಲು ಸೂಚಿಸಿ ಅನುಮೋದನೆ ನೀಡಿರುತ್ತದೆ.<br><br>ಸೇತುವೆ ಹಾಗೂ ರಸ್ತೆಯ ಭಾಗದ ಕಾಮಗಾರಿಯನ್ನು 2025ರ ಜೂನ್ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಿದೆ. |

**ಸಂಖ್ಯೆ: ಜಸಂಇ 26 ಡಬ್ಲ್ಯೂಎಲ್ಎ 2024**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**